ಕರ್ನಾಟಕ ಸರ್ಕಾರ
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ

080 – 29753051
directorfbish@gmail.com
www.esuraksha.karnataka.gov.in

ನಿರ್ದೇಶನಾಲಯ,
ಕಲ್ಯಾಣ-ಸುರಕ್ಷಾ ಭವನ, ಡೈರಿ ವೃತ್ತ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 029

ಸಂ: ಎಲ್ ಜಿಎಲ್–2/ಇತರೆ/ಸಿಆರ್–02/2023–24

ದಿನಾಂಕ : 15–04–2023

# ಸುತ್ತೋಲೆ

ವಿಷಯ : ಕಾರ್ಖಾನೆಯ ಲೈಸೆನ್ಸ್ ಸ್ವಯಂ ನವೀಕರಣ (Auto Renewal) ಕುರಿತು.

ಉಲ್ಲೇಖ : ಸರ್ಕಾರದ ಆದೇಶ ಸಂ: LD 241 LET 2020, ಬೆಂಗಳೂರು, ದಿನಾಂಕ 26-09-2020.

- 0 -

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ಕಾರ್ಖಾನೆಯ ಲೈಸನ್ಸ್ ಅನ್ನು ಆಡಳಿತವರ್ಗದವರು ನಿಗಧಿತ ಶುಲ್ಕ ಭರಿಸಿ ಇ–ತಂತ್ರಾಂಶದಲ್ಲಿ ಸ್ವಯಂ ಚಾಲಿತ ನವೀಕರಣ ಪರವಾನಗಿ ಪಡೆಯುವ ವ್ಯವಸ್ಥೆಯನ್ನು ಇಲಾಖೆಯು ಈಗಾಗಲೇ ಜಾರಿಗೊಳಿಸಿರುತ್ತದೆ.

ಈ ತಂತ್ರಾಂಶದ ವ್ಯವಸ್ಥೆಯನ್ನು ಸರ್ಕಾರವು ಅಂಗೀಕರಿಸಿದ್ದು, ನಿಗಧಿತ ಶುಲ್ಕ ಪಾವತಿಸಿದ ನಂತರ ಇ–ತಂತ್ರಾಂಶ ದಿಂದ ಸ್ವೀಕೃತವಾದ ಸ್ವಯಂ–ನವೀಕರಣ ಪರವಾನಗಿಯ ಪ್ರಮಾಣ ಪತ್ರದಲ್ಲಿ ಇಲಾಖಾ ಮುಖ್ಯಸ್ಥರ ಸಹಿ ಮುದ್ರಿತವಾಗಿರುತ್ತದೆ. ಸದರಿ ಪ್ರಮಾಣ ಪತ್ರವು computer generated ಆಗಿದ್ದು, ಇದಕ್ಕೆ ಮತ್ತೆ ಯಾವುದೇ ಸಹಿ ಅಗತ್ಯವಿರುವುದಿಲ್ಲ. ಈ ಪ್ರಮಾಣ ಪತ್ರವು ಅಧಿಕೃತವಾಗಿದ್ದು, ಪ್ರತ್ಯೇಕವಾಗಿ ಕಾರ್ಖಾನೆ ಆಡಳಿತವರ್ದವರು ಪ್ರಮಾಣ ಪತ್ರದಲ್ಲಿ ಕ್ಷೇತ್ರಾಧಿಕಾರಿಗಳ ಕಛೇರಿಯ ಮೊಹರು ಹಾಗೂ ಸಹಿ ಪಡೆಯುವ ಅವಶ್ಯಕತೆ ಇರುವುದಿಲ್ಲ.

ಅದೇ ರೀತಿ online ನಲ್ಲಿ ಪಡೆಯುವ ಯಾವುದೇ ಅನುಮೋದನೆಗಳನ್ನು (ನಕ್ಷಾನುಮೋದನೆ / ನೋಂದಣಿ / ತಿದ್ದುಪಡಿ / ವರ್ಗಾವಣೆ ಕುರಿತಂತೆ) ಕ್ಷೇತ್ರಾಧಿಕಾರಿಗಳಿಂದ ದೃಢೀಕರಿಸುವ ಅವಶ್ಯಕತೆ ಇರುವುದಿಲ್ಲ.

ಈ ಕುರಿತು ಆಡಳಿತವರ್ಗದವರಿಗೆ ಅಗತ್ಯ ತಿಳುವಳಿಕೆ ನೀಡಲು ಎಲ್ಲಾ ಕ್ಷೇತ್ರಾಧಿಕಾರಿಗಳಿಗೆ ಸೂಚಿಸಿದೆ.

ನಿರ್ದೇಶಕರು
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ
ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಬೆಂಗಳೂರು

P.T.O

ಪ್ರತಿಯನ್ನು,

1. ಕಾರ್ಖಾನೆಗಳ ಜಂಟಿ ನಿರ್ದೇಶಕರು ವಲಯ – 1 / 2 / ವೈದ್ಯಕೀಯ / ಮೈಸೂರು / ಹುಬ್ಬಳ್ಳಿ ರವರ ಮಾಹಿತಿಗಾಗಿ.
2. ಕಾರ್ಖಾನೆಗಳ ಉಪ ನಿರ್ದೇಶಕರು, ಬೆಂಗಳೂರು ವಿಭಾಗ – 1 / 2 / 3 / ರಾಮನಗರ / ಹೊಸಕೋಟೆ / ಮೈಸೂರು / ಬೆಳಗಾವಿ / ಮಂಗಳೂರು / ತುಮಕೂರು.
3. ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು, ಬೆಂಗಳೂರು ವಿಭಾಗ – 4 / 5 / 6 / 7 / 8 / ಹುಬ್ಬಳ್ಳಿ / ಕಲಬುರಗಿ / ಬಳ್ಳಾರಿ.
4. ಕಾರ್ಖಾನೆಗಳ ಸಹಾಯಕ ನಿರ್ದೇಶಕರು, ಬೆಂಗಳೂರು ವಿಭಾಗ – 9 / 10 / 11 / 12 / 13 / 14 / 15 / 16 / 17 / 18 / ದಾವಣಗೆರೆ / ಶಿವಮೊಗ್ಗ / ರಾಯಚೂರು / ಹುಬ್ಬಳ್ಳಿ / ಮೈಸೂರು / ಮಂಗಳೂರು / ಹಾಸನ / ಉಡುಪಿ / ಕೊಪ್ಪಳ / ಬೆಳಗಾವಿ.